ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 157-161.**
**©*IIMRD*, Mysuru.**

**www.iimrd.com**

# ಕನ್ನಡ ಸಾಹಿತ್ಯದಲ್ಲಿ ರಂಗಭೂಮಿಕೆ ಹಾಗೂ 21ನೇ ಶತಮಾನದ ನೀನಾಸಂ ಸಂಸ್ಥೆ

**ಡಾ. ಪ್ರೀತಿ ಎ. ಎಂ.***

*ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕರಗುಂದ.

***ಸಾರಾಂಶ:* (Abstract)**

ಭಾಷೆಯ ಉಗಮದೊಂದಿಗೆ ಸಾಹಿತ್ಯದ ಹಾಗೂ ಕಲೆಯ ಹಲವಾರು ಮಜಲುಗಳಲ್ಲಿ ರಂಗಭೂಮಿಕೆ ಅತೀ ಪ್ರಮುಖವಾದದ್ದು. ಇಂತಹ ರಂಗಭೂಮಿಕೆಯ ವೇದಿಕೆಯು ಹಲವಾರು ಪ್ರತಿಭೆಗಳನ್ನು ಪರಿಚಯಿಸಿದೆ. ಅದೇ ರೀತಿಯಾಗಿ 1949ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರದ ಬಳಿ ಹೆಗ್ಗೋಡಿನಲ್ಲಿ ಕೆ.ವಿ.ಸುಬ್ಬಣ್ಣರವರಿಂದ ಸ್ಥಾಪಿತವಾದ ನೀನಾಸಂ ಒಂದು ಪ್ರಮುಖ ರಂಗಭೂಮಿಕೆಯಾಗಿ ಇಂದಿಗೂ ಕಾರ್ಯ ನಿರ್ವಹಿಸುತ್ತಾ, ಕಲಾ ಪ್ರತಿಭೆಗಳನ್ನು ಪರಿಚಯಿಸುವ ಕಾರ್ಯ ಮಾಡುತ್ತಿರುವುದು ಕೂಡ ಒಂದು ಅಸಾಧಾರಣ ಕಾರ್ಯವೇ ಆಗಿದೆ. ಈ ಲೇಖನದಲ್ಲಿ ಅಂತಹ ನೀನಾಸಂನ ಹಿನ್ನಲೆ ಹಾಗೂ ಕಾರ್ಯ ಚಟುವಟಿಕಕ ಪ್ರವೃತ್ತಿಯ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

***ಮುಖ್ಯಪದಗಳು:* (Keywords)** ಕನ್ನಡ ಸಾಹಿತ್ಯ, ರಂಗಭೂಮಿ, ನೀನಾಸಂ.

**ಪೀಠಿಕೆ**

ಭಾಷೆ ನಾಗರಿಕ ಸಮಾಜದ ಪ್ರಮುಖ ಲಕ್ಷಣ. ಭಾಷೆಯ ಉದಯದೊಂದಿಗೆ ಸಾಹಿತ್ಯದ ಉದಯವಾಯಿತೆಂದರೆ ತಪ್ಪಾಗಲಾರದು. ಮಾನವ ಭಾಷೆ ವಿಶಿಷ್ಟವಾದುದು ಏಕೆಂದರೆ ಇದು ಉತ್ಪಾಧನೆ, ಪುನರಾವರ್ತನೆ, ಹಾವ ಭಾವ ಬದಲಾವಣೆಯಂತಹ ಸಾಮರ್ಥ್ಯಗಳನ್ನು ಒಳಗೊಂಡಿರುತ್ತದೆ. ಭಾಷೆಯ ಪ್ರಮುಖ ಲಕ್ಷಣ ಮಾನವ ಸಂಸ್ಕೃತಿಯ ಪ್ರತಿಬಿಂಬ. ಕನ್ನಡ ಸಾಹಿತ್ಯದ ಉಗಮ ಯಾವ ಕಾಲದಲ್ಲಾಯಿತು ಎಂಬುದನ್ನು ಊಹಿಸಲು ಅಸಾಧ್ಯವಾದುದು. ಆದರೆ ಅದು ಹಂತಹಂತವಾಗಿ ಅದ್ಭುತವಾಗಿ ಬೆಳೆದು ಬಂದಿರುವುದಂತೂ ಅಸಮಾನ್ಯವಾದುದು. ಪ್ರಥಮವಾಗಿ ಕನ್ನಡ ಸಾಹಿತ್ಯವು ಕೇವಲ ಮೌಖಿಕವಾಗಿ ಅಂದರೆ ಹಾಡುಗಳು, ಕಥೆಗಳು, ಲಾವಣಿಗಳು ಮುಂತಾದವುಗಳ ಮೂಲಕ ಹೊರಹೊಮ್ಮತೊಡಗಿದವು. ನಂತರ ಅವು ಕೇವಲ ಆ ಕ್ಷಣಕ್ಕೆ ಮಾತ್ರ ಸೀಮಿತವಾಗಿದ್ದ ಸಾಹಿತ್ಯ ಅವು ಶಾಶ್ವತವಾಗಿ ಸಮಾಜದಲ್ಲಿ ರಾರಾಜಿಸುವಂತೆ ಮಾಡಲು ಲಿಖಿತ ರೂಪವನ್ನು ಕಂಡುಕೊಳ್ಳಲಾಯಿತು. ಅವುಗಳನ್ನು ಆರಂಭಿಕವಾಗಿ ಬಂಡೆಗಳು, ಕಲ್ಲುಗಳ ಮೇಲೆ ಕೆತ್ತನೆ ಮಾಡುವುದರ ಮೂಲಕ ಬರವಣಿಗೆ ಆರಂಭಿಕ ಹಂತವನ್ನು ಪಡೆಯಲಾಯಿತು. ಇದರಲ್ಲಿ ಇನ್ನೂ ಆಧುನಿಕತೆ ಮೂಡಿ ತಾಳೆಗರಿಗಳ ಮೂಲಕ ಕನ್ನಡ ಸಾಹಿತ್ಯವನ್ನು

*Please cite this article as: ಪ್ರೀತಿ. ಎ. ಎಂ.* (2022). ಕನ್ನಡ ಸಾಹಿತ್ಯದಲ್ಲಿ ರಂಗಭೂಮಿಕೆ ಹಾಗೂ 21ನೇ ಶತಮಾನದ ನೀನಾಸಂ ಸಂಸ್ಥೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 157–161.*

ಅಮರವಾಗಿಸುವ ಕಲೆಯನ್ನು ಕಂಡುಕೊಳ್ಳಲಾಯಿತು. ಹೀಗೆ ಕೇವಲ ಮೌಖಿಕವಾಗಿ ವ್ಯಕ್ತವಾಗುತ್ತಿದ್ದ ಸಾಹಿತ್ಯ ಬರವಣಿಗೆಯ ಮೂಲಕ ಇಂದಿಗೂ ಅವು ಅಮರವಾಗಿ ಉಳಿದಿರುವುದನ್ನು ನಾವು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯವನ್ನು ಉಳಿಸಲು ಹಲವಾರು ಕನ್ನಡ ರಾಜಮನೆತನಗಳು ಆಶ್ರಯ ನೀಡಿದ್ದ ಕವಿಗಳಿಂದ ಮಾತ್ರ ಸಾಧ್ಯವಾದದ್ದಾಗಿದೆ. ಕನ್ನಡ ಸಾಹಿತ್ಯದ ಪ್ರಕಾರಗಳು, ಕೃತಿಗಳ ಪರಿಚಯ, ಕನ್ನಡ ನಾಡಿನ ಚರಿತ್ರೆ, ಕರ್ನಾಟಕ ಆಳರಸರ ಕನ್ನಡ ಕೊಡುಗೆ, ಕನ್ನಡಕ್ಕೆ ಸಂಬಂಧಿಸಿದ ಶಾಸನಗಳು ಮತ್ತು ಅವುಗಳ ಚಾರಿತ್ರಿಕ, ಸಾಂಸ್ಕೃತಿಕ ವಿವರಗಳು, ಕನ್ನಡ ಛಂದಸ್ಸಿನ ಚರಿತ್ರೆ, ಕನ್ನಡ ವ್ಯಾಕರಣದ ಚರಿತ್ರೆ, ಕನ್ನಡ ಭಾಷೆ ಬೆಳೆದು ಬಂದ ಬಗೆ, ಮತ್ತು ಕನ್ನಡಿಗರ ಬಗೆಗೆ ಬಂದ ಜೀವನ ಚರಿತ್ರೆಗಳು ಇತ್ಯಾದಿಯಾಗಿ ಕನ್ನಡ ಸಾಹಿತ್ಯ ಚರಿತ್ರೆಗೆ ಪೂರಕವಾದ ಮಾಹಿತಿಯನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ, ಪ್ರಾಕೃತ ಮತ್ತು ಸಂಸ್ಕೃತ ಸಾಹಿತ್ಯದ ಪ್ರೇರಣೆ, ಪೂರ್ವದ ಹಳೆಗನ್ನಡ ಸಾಹಿತ್ಯದ ಪ್ರೇರಣೆ, ನಡುಗನ್ನಡ ಸಾಹಿತ್ಯದ ಪ್ರೇರಣೆ ಕನ್ನಡ ಭಾಷೆ ಮತ್ತು ಭಾಷಾ ವಿಜ್ಞಾನ, ಕನ್ನಡ ಛಂದಸ್ಸು, ಕನ್ನಡ ಜಾನಪದ, ಕನ್ನಡ ಸಾಹಿತ್ಯ ವಿಮರ್ಶೆ, ಜೀವನ ಚರಿತ್ರೆ, ಪ್ರವಾಸಿ ಸಾಹಿತ್ಯ, ಪ್ರಬಂಧ ಸಾಹಿತ್ಯ, ಆತ್ಮಕಥನ, ವಿಜ್ಞಾನ ಸಾಹಿತ್ಯ ಬೆಳೆದು ಬಂದ ಬಗೆ ಹಾಗೂ ಸಮಗ್ರ ವಿಚಾರಗಳನ್ನು ಕನ್ನಡಕ್ಕೆ ಅನ್ವಯಿಸಿ ಸಾಹಿತ್ಯ ಬೆಳವಣಿಗೆಯಾಗಿರುವುದು ಸ್ವಚ್ಛಂದವಾಗಿದೆ.

ಕನ್ನಡ ಸಾಹಿತ್ಯದಲ್ಲಿ ನಾಟಕ ಸಾಹಿತ್ಯ ಕಲೆ ಬೆಳೆದು ಬಂದಿದ್ದು ರಾಜರಿಂದ ಮಾತ್ರ ಎಂಬುದು ಅತೀ ಪ್ರಮುಖವಾದುದಾಗಿದೆ. ಆ ನಾಟಕಗಗಳು ರಂಗ ಭೂಮಿ ಎಂಬ ಕಲಾ ಪ್ರೋತ್ಸಾಹಕ ಸಂಸ್ಥೆಗಳಿಂದ ಬೆಳೆದು ಇಂದು ಹೆಮ್ಮರವಾಗಿದೆ. ಈ ರಂಗಭೂಮಿಗಳ ಉಗಮದ ಸ್ಪಷ್ಟತೆ ಇಲ್ಲದಿದ್ದರೂ ಇದರ ಪರಂಪರೆ ಮಾತ್ರ ಅತೀ ಪ್ರಾಚೀನವಾದುದ್ದೆಂಬುದರಲ್ಲಿ ಸಂದೇಹವಿಲ್ಲ. ಅದೆ ದೃಷ್ಟಿಯಲ್ಲಿ ಚಿಕ್ಕದೇವರಾಜರ ಆಸ್ಥಾನದಲ್ಲಿದ ಸಿಂಗಾರಾರ್ಯ ರಚಿಸಿದ "ಮಿತ್ರಾವಿಂದಾ ಗೋವಿಂದ" ಇತಿಚೆಗೆ ಸಿಕ್ಕಿರುವ ಪ್ರಥಮ ಕನ್ನಡ ನಾಟಕವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದ ಶಾಸನಗಳಲ್ಲಿ ನಾಟಕಗಳು ಮತ್ತು ರಂಗಭೂಮಿಕೆಗಳಾಗಿ ಬದಲಾಗಿ ಕನ್ನಡ ನಾಡಿನಲ್ಲಿ ಕಲಾ ಪ್ರತಿಭೆ ಪ್ರೋತ್ಸಾಹಕ್ಕಾಗಿ ತಮ್ಮದೆ ಆದ ಕೊಡುಗೆಯನ್ನು ನೀಡಿವೆ. ಈ ರೀತಿ ಕಲಾ ಪ್ರತಿಭೆ ಶೋಧದ ಫಲವಾಗಿ 1949ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರದ ಬಳಿ ಹೆಗ್ಗೋಡಿನಲ್ಲಿ ಕೆ.ವಿ.ಸುಬ್ಬಣ್ಣರವರಿಂದ ಸ್ಥಾಪನೆಯಾದ ನೀಲಕಂಠೇಶ್ವರ ನಾಟ್ಯ ಸಂಘ (ನೀನಾಸಂ) ಎಂಬ ರಂಗಭೂಮಿಯು ಅಂದಿನಿಂದ ಇಂದಿನವರೆಗೂ ತನ್ನ ಕಾರ್ಯವನ್ನು ನಿರ್ವಹಿಸುತ್ತಾ 21ನೇ ಶತಮಾನದಲ್ಲೂ ಕೂಡ ತನ್ನ ಅಜಾನುಬಾಹುಗಳನ್ನು ಚಾಚಿ ಕಾರ್ಯಪ್ರವೃತ್ತರಾಗಿರುವುದನ್ನು ನಾವು ಕಾಣಬಹುದಾಗಿದೆ.

ಪ್ರಾರಂಭದಲ್ಲಿ ಆರಂಭವಾದ ನೀನಾಸಂ ರಂಗ ಶಿಕ್ಷಣ ಸಂಸ್ಥೆ ಕನ್ನಡ ಉತ್ಸಾಹಿ ಯುವಕರಿಗೆ ರಂಗ ಕಲೆಗಳಲ್ಲಿ ಶಾಸ್ತ್ರೀಯವಾದ ತರಬೇತಿ ನೀಡಬೇಕು ಹಾಗೂ ರಂಗಭೂಮಿಯಂತಹ ಶಕ್ತಿಯುತ ಮಾಧ್ಯಮವನ್ನು ಪ್ರಸ್ತುತ ಭಾರತೀಯ ಸಂಧರ್ಭಕ್ಕೆ ಹೊಂದುವಂತೆ ಒಗ್ಗಿಸಿಕೊಂಡು ಸಮೂಹ ಸಂಪರ್ಕವನ್ನು ಸಾಧ್ಯಗೊಳಿಸಿಕೊಳ್ಳಬೇಕು ಹಾಗೂ ಇಡೀ ಕರ್ನಾಟಕದಾದ್ಯಂತ ರಂಗ ಭಾಷೆಯನ್ನು ಪರಿಚಯಿಸುವ ಹಾಗೂ ಅದರಲ್ಲಿ ತೊಡಗಿಸಿಕೊಳ್ಳುವ ತರುಣರ ಪಡೆಯನ್ನು ನಿರ್ಮಾಣ ಮಾಡಿ ರಂಗ ಕಲೆಯನ್ನು 21ನೇ ಶತಮಾನದಲ್ಲೂ ಕೂಡ ಜೀವಂತವಾಗಿರಿಸುವ ಕನಸನ್ನು ಹೊತ್ತು ಇಂದಿಗೂ ಕೂಡ ಕಾರ್ಯ ನಿರ್ವಹಿಸುತ್ತಿದೆ. ಈ ರಂಗ ಶಿಕ್ಷಣ ಕೇಂದ್ರ ಸ್ಥಾಪನೆಯ ಉದ್ದೇಶಗಳು ಇಂದಿಗೂ ಕೂಡ

ಸಾಧಿತವಾಗುತ್ತಲಿವೆ ಎಂಬ ಖುಷಿಯ ವಿಚಾರ ನಮ್ಮೆಲ್ಲರನ್ನು ಅತ್ತ ಕಡೆ ಒಂದು ಸಲ ಗಮನವಿಡುವಂತೆ ಮಾಡುತ್ತಲಿದೆ.

ಕನ್ನಡ ರಂಗಭೂಮಿಯನ್ನು ನೋಡಿದರೆ ವಿಕೇಂದ್ರಿಕರಣ ಮತ್ತು ವೃತ್ತಿಪರತೆ ಎಂಬ ಎರಡು ಹೊಸ ಗುಣಗಳು ರೂಢಿಗೊಳ್ಳುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಬೆಳವಣಿಗೆ ರಂಗಶಿಕ್ಷಣ ಕೇಂದ್ರ ತನ್ನ ಪಾಲನ್ನು ಸಲ್ಲಿಸುತ್ತಿರುವುದು ಕೂಡ ಕಣ್ಣಿಗೆ ಕಾಣುವಂತಿದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹಲವು ಸ್ಥಳಗಳಲ್ಲಿ ಈ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ತಮ್ಮ ಚಟುವಟಿಕೆಗಳಲ್ಲಿ ಹರಡಿಕೊಂಡಿದ್ದಾರೆ. ತಿರುಗಾಟ, ರಂಗಾಯಣ, ಕಿನ್ನರ ಮೇಳ, ಜನಮನದಾಟ, ಆಟಮಾಟ, ಥಿಯೇಟರ್ ಸಮುದಾಯ– ಮುಂತಾದ ವೃತ್ತಿ ರಂಗ ಸಂಘಟನೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಈ ಕೇಂದ್ರದ ವಿದ್ಯಾರ್ಥಿಗಳಿದ್ದಾರೆ. ಕೇಂದ್ರದ ಇನ್ನೊಂದು ಮುಖದ ಸಾಧನೆಯೆಂದರೆ “ರಂಗ ಶಿಕ್ಷಣ” ಎಂಬ ಅಮೂರ್ತ ಶಾಸ್ತ್ರವನ್ನು ನಮ್ಮ ದೇಶದ ಅಗತ್ಯಕ್ಕೆ ಹೊಂದುವಂತೆ ಕಾರ್ಯರೂಪದ ಶಿಕ್ಷಣ ಕ್ರಮವಾಗಿ ರೂಢಿಗೊಳಿಸಿಕೊಂಡಿದ್ದು ರಂಗ ಸಿದ್ಧಾಂತ, ಸಮೂಹ ಸಂಪರ್ಕ ಮುಂತಾದ ವಿಷಯಗಳನ್ನು ಉಪೇಕ್ಷಿಸದೆ ಇವತ್ತಿನ ರಂಗ ಭೂಮಿಗೆ ಅಗತ್ಯವಾಗುವ “ಅಭಿನಯ ಭಾಷೆ” ಯೊಂದನ್ನು ಪ್ರಾತ್ಯಕ್ಷಿಕವಾಗಿ ಗೊಳಿಸುವುದು ಈ ರಂಗ ಶಿಕ್ಷಣದ ಅಂದಿನ ಇಂದಿನ ಉದ್ದೇಶವೂ ಕೂಡ ಸಾಕಾರಗೊಳ್ಳುತ್ತಲಿದೆ.

ಇಪ್ಪಾತ್ತಾರು ವರ್ಷಗಳಲ್ಲಿ ರಂಗಶಿಕ್ಷಣ ಕೇಂದ್ರ ಸಾಂದ್ರವಾದ ಮತ್ತು ವೈಜ್ಞಾನಿಕವಾದ ಪಠ್ಯಕ್ರಮವೊಂದನ್ನು ರೂಪಿಸಿಕೊಂಡಿದೆ. ರಂಗಶಿಕ್ಷಣಕ್ಕೆ ಅಗತ್ಯವಾದ ಮಾಹಿತಿ ಹಾಗು ಪಠ್ಯಗಳನ್ನು ಕನ್ನಡದಲ್ಲಿ ತಯಾರಿಸಿ ಪ್ರಕಟಿಸಿದೆ ಮತ್ತು ಈ ಎಲ್ಲಾ ವಿಷಯಕ್ಕೆ ಸಂಬಂಧಿಸಿದ ಹಲವು ದೃಶ್ಯ–ಶ್ರವ್ಯ ಉಪಕರಣಗಳ ಹಾಗು ಪುಸ್ತಕಗಳ ಉತ್ತಮ ಭಂಡಾರವನ್ನ ನಿರ್ಮಿಸಿಕೊಂಡಿದೆ. ಈ ರಂಗ ಶಿಕ್ಷಣ ಕೇಂದ್ರ ಒಟ್ಟು 146 ಮುಖ್ಯ ನಾಟಕಗಳು ಹಾಗು 205 ಅಭ್ಯಾಸ ಪ್ರಯೋಗಗಳನ್ನ ರಂಗದ ಮೇಲೆ ತಂದಿದೆ. ಇಷ್ಟೇ ಅಲ್ಲದೆ ತಾತ್ವಿಕ, ಪ್ರಾಯೋಗಿಕ ತರಬೇತಿಯೂ ಅಲ್ಲದೆ ಚಲನಚಿತ್ರ, ಕಾವ್ಯ, ಸಾಹಿತ್ಯ, ಚಿತ್ರಕಲೆ, ಸಂಗೀತ ಮಾಧ್ಯಮಗಳ ಸಹೃದಯತೆ ಶಿಭಿರಗಳನ್ನು, ಕಂಪನಿ ನಾಟಕ ಮುಂತಾದವುಗಳ ಬಗ್ಗೆ ವಿಶೇಷ ತರಬೇತಿಯನ್ನು, ಶೈಕ್ಷಣಿಕ ಪ್ರವಾಸಗಳನ್ನು ಆಗಾಗ ಪ್ರದರ್ಶಿಸುತ್ತಾ ಬರುತ್ತಿದೆ.

ನೀನಾಸಂ ರಂಗಶಿಕ್ಷಣ ಕೇಂದ್ರ, ಒಂದು ಕೇಂದ್ರ ಕಛೇರಿ, ಒಂದು ಭೋಧನ ಕೊಠಡಿ, ಒಂದು ತಾಲಿಮು ಶಾಲೆ, ಕಿರು ರಂಗಮಂದಿರ ಮತ್ತು ಬಯಲುರಂಗ ಸ್ಥಳ, 600 ಮಂದಿ ಕೂರಬಹುದಾದ ಸುಸಜ್ಜಿತ ಪ್ರೋಸೀನಿಯಂ ರಂಗಮಂದಿರ, ಶಿವರಾಮ ಕಾರಂತರ ರಂಗಮಂದಿರವೂ ಲಭ್ಯವಿದ್ದು ಹುಡುಗ ಹುಡುಗಿಯರಿಗೂ ಪ್ರತ್ಯೇಕ ವಸತಿಗೃಹಗಳಿದ್ದು, ಹೊರಗಿನಿಂದ ಬರುವ ಅತಿಥಿ ಅಧ್ಯಾಪಕರಿಗೂ ಉಳಿಯುವ ವ್ಯವಸ್ಥೆ ಇವೆ.

ಈ ಸಂಸ್ಥೆಯು ಇಂದಿಗೂ ಕೂಡ ಹಲವಾರು ಚಟುವಟಿಕೆಗಳ ಮೂಲಕ ಕಾರ್ಯನಿರ್ವಹಿಸುತ್ತಾ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಅವುಗಳೆಂದರೆ ತಿರುಗಾಟ, ರಂಗಶಿಕ್ಷಣ ಕೇಂದ್ರ, ನೀನಾಸಂ ಚಿತ್ರ ಸಮಾಜ, ನೀನಾಸಂ ಜನಸ್ಪಂದನ, ನೀನಾಸಂ ಮಾತುಕತೆ, ನೀನಾಸಂ ಪ್ರತಿಷ್ಠಾನ, ಅಕ್ಷರ ಪ್ರಕಾಶನ, ಇವುಗಳ ಪ್ರಭಾವದಿಂದಲೇ ಇಂದಿಗೂ ಕೂಡ ಒಂದು ಸರ್ವಶ್ರೇಷ್ಠ ರಂಗಭೂಮಿಕೆಯ ಕೇಂದ್ರವಾಗಿ

ಪ್ರಜ್ವಲಿಸುತ್ತಲಿದೆ. ನೀನಾಸಂ ಸಂಸ್ಥೆ 21ನೇ ಶತಮಾನದಲ್ಲೂ ಕೂಡ ನಿರ್ವಹಿಸುತ್ತಿರುವ ಕೆಲವು ಕಾರ್ಯ ಚಟುವಟಿಕೆಗಳು ಈ ಕೆಳಗಿನಂತಿವೆ.

**ತಿರುಗಾಟ**

1986ರಲ್ಲಿ ಆರಂಭವಾದ ನೀನಾಸಮ ಸಂಸ್ಥೆಯ ನಾಟಕ ತಂಡವೇ 'ತಿರುಗಾಟ'. ನೀನಾಸಂ ರಂಗ ಶಿಕ್ಷಣ ಕೇಂದ್ರದಿಂದ ತರಬೇತಿ ಹೊಂದಿದ ಸುಮಾರು 20 ಕಲಾವಿದರ ತಂಡ ಪ್ರತೀ ವರ್ಷ ಜುಲೈ ತಿಂಗಳಲ್ಲಿ ಕಾರ್ಯಚಟುವಟಿಕೆಗಳನ್ನ ರೂಪಿಸಲಾಗುತ್ತದೆ. ಈ ತಂಡವು ಆ ವರ್ಷಕ್ಕೆ ನಿಗಧಿಪಡಿಸಿಕೊಂಡ ನಾಟಕಗಳನ್ನು ಅಭ್ಯಾಸ ಮಾಡಿಕೊಂಡು ಮುಂದಿನ ವರ್ಷದ ಮಾರ್ಚ್ ತಿಂಗಳವರೆಗೂ ಕೂಡ ರಾಜ್ಯಾದ್ಯಂತ ಸಂಚರಿಸಿ ಸುಮಾರು 4 ತಿಂಗಳ ಈ ಸಂಚಾರದಲ್ಲಿ ಸರಾಸರಿ 50–100 ಕಿಲೋಮೀಟರ್ ದೂರದಲ್ಲಿ ಒಂದರಂತೆ ಪ್ರದರ್ಶನವನ್ನು ನೀಡುತ್ತ ಸಾಗುತ್ತದೆ. ಬಹುತೇಕ ಪ್ರತಿ ದಿನ ಎನ್ನುವಂತೆ ಸುಮಾರು 140 ದಿನಗಳ ಕಾಲಾವಧಿಯಲ್ಲಿ 120 ಪ್ರದರ್ಶನವನ್ನು ನೀಡುತ್ತವೆ. ಈ ತಿರುಗಾಟದ ಹೆಮ್ಮೆಯ ವಿಚಾರವೆಂದರೆ ಶೇ 80 ಭಾಗ ಪ್ರದರ್ಶನಗಳನ್ನು ಸಣ್ಣ ಊರು ಅಥವಾ ಹಳ್ಳಿಗಳಲ್ಲೇ ಆಗಿರುವುದು ಹಾಗು 80 ಲಕ್ಷಕ್ಕೂ ಮೀರಿ ಪ್ರೇಕ್ಷಕರನ್ನು ತಲುಪಿದ ಹಿರಿಮೆ ಈ ಸಂಸ್ಥೆಯದ್ದಾಗಿದೆ. ತಿರುಗಾಟ ತಂಡಕ್ಕೆ ಆಯ್ಕೆ ಮಾಡುವ ನಾಟಕಗಳು ಪಾಶ್ಚಾತ್ಯ, ಭಾರತೀಯ ಹಾಗು ಕನ್ನಡ ಈ ಮೂರರಲ್ಲಿ ಎರಡಾದರೂ ಇರುವಂತೆ ನೋಡಿಕೊಳ್ಳಲಾಗುತ್ತದೆ.

**ನೀನಾಸಂ ಸಂಸ್ಥೆಯ ಅಕ್ಷರ ಪ್ರಕಾಶನ**

1960ರಲ್ಲಿ ಹುಟ್ಟಿದ ಅಕ್ಷರ ಪ್ರಕಾಶನವು ಕರ್ನಾಟಕ ಒದುಗ ಸಾಹಿತ್ಯ ಪ್ರಿಯರಿಗೆ ನೀಡಿರುವ ಕೊಡುಗೆ ಅಮೂಲ್ಯವಾದುದು. ಈತನಕ ಒಟ್ಟು 50,000 ಕ್ಕೂ ಹೆಚ್ಚು ಪುಟಗಳ ವಿಸ್ತೃತ ಸಾಹಿತ್ಯವನ್ನು ಪ್ರಕಟಿಸಿದೆ ಹಾಗು 800ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. 21ನೇ ಶತಮಾನದಲ್ಲೂ ಕೂಡ ಪುಸ್ತಕದ ನಿರ್ಮಾಣ ಹಾಗೂ ಮಾರಾಟದ ವ್ಯವಸ್ಥೆಗಳನ್ನ ಇನ್ನಷ್ಟು ಅಚ್ಚುಕಟ್ಟಾಗುವಂತೆ ಉತ್ತಮ ಪಡಿಸುವ ಆಶಯವನ್ನು ಹೊಂದಿದೆ.

**ನಿನಾಸಂ ಚಿತ್ರ ಸಮಾಜ**

ಚಲನಚಿತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳನ್ನು ಪ್ರಕಟಿಸಿದೆ. ಸತತವಾಗಿ ಸಹೃದಯತೆ ಶಿಬಿರಗಳನ್ನು ನಡೆಸಿದ ಗ್ರಾಮೀಣ ಚಿತ್ರ ಸಮಾಜ ಇದಾಗಿದ್ದು, ಇಲ್ಲಿ ಚಿತ್ರ ವಿಷಯಗಳು, ಪಾತ್ರಗಳು ಅವುಗಳ ನಿರ್ಮಾಣದ ಬಗೆ, ಮುಂತಾದವುಗಳ ಬಗ್ಗೆ ಪುಸ್ತಕಗಳ ರಚನೆ ಪಾತ್ರಾಭಿನಯ ಮಾಡುವ ಚಟುವಟಿಕೆಗಳಲ್ಲಿ ಇಂದಿಗೂ ಕೂಡ ಪ್ರಸ್ತುತಗೊಳ್ಳುತ್ತಿದ್ದೆ.

**ನಿನಾಸಂ ಜನಸ್ಪಂದನ**

ಅಮೇರಿಕಾದ ಫೋರ್ಡ್ ಫೌಂಡೇಶನ್ ನೆರವಿನೊಂದಿಗೆ ನಿನಾಸಂ ನಡೆಸಿದ 2 ವರ್ಷಗಳ ರಂಗ ಚಲನಚಿತ್ರ ಪ್ರಸಾರ ಕಾರ್ಯಕ್ರಮ ಇದಾಗಿದ್ದು ಹಲವಾರು ಕಲಾವಿಧರ ಕಲಾ ಪ್ರೋತ್ಸಹ, ಉತ್ತಮ ನಾಟಕಗಳ ಮಂಡನೆಯಂತಹ ಉತ್ಕೃಷ್ಟ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದು ಉತ್ತಮ ಪ್ರೋತ್ಸಾಹದ ಫಲವಾಗಿ ನಿನಾಸಂ ಸಂಸ್ಥೆ ಜನಸ್ಪಂದನ ಕಾರ್ಯಚಟುವಟಿಕೆಗಳನ್ನು ಇಂದಿಗೂ ಮುಂದುವರೆಸುತ್ತಾ ಬಂದಿರುವುದನ್ನು ನಾವು ಕಾಣಬಹುದಾಗಿದೆ.

**ನಿನಾಸಂ ಸಂಸ್ಕೃತಿ ಶಿಬಿರ**

ವ್ಯಕ್ತಿಗಳ ಸಂಸ್ಕೃತಿ, ಕಲೆಗಳು ಮತ್ತು ಸಮಾಜ ಕುರಿತಾದ ಕರ್ನಾಟಕದ ವಿವಿಧ ಭಾಗಗಳ ಸಾಂಸ್ಕೃತಿಕ ಕ್ರಿಯಶೀಲರಿಗಾಗಿ ಪ್ರತೀ ವರ್ಷ ಅಕ್ಟೋಬರ್‌ನಲ್ಲಿ ಏರ್ಪಡಿಸಲಾಗುವ 7 ದಿನಗಳ ಶಿಬಿರ ಮತ್ತು ಸಂಸ್ಕೃತಿ ಉತ್ಸವ ಇದಾಗಿದ್ದು ಇಂದಿಗೂ ಕೂಡ ಕಲಾ ಪ್ರತಿಭೆಗಳ ಶೋಧ ಹಾಗೂ ಅವುಗಳ ಬೆಳವಣಿಗೆ ಮಾಡುವ ಉದಾತ್ತ ಕಾರ್ಯವನ್ನು ಮಾಡುತ್ತಾ ಬಂದಿದೆ. ಇಷ್ಟೇ ಅಲ್ಲದೆ ಗ್ರಾಮೀಣ ಕರ್ನಾಟಕದ ಸುಸಜ್ಜಿತ ಶಿವರಾಂ ಕಾರಂತರ ರಂಗಮಂದಿರ, ದೆಹಲಿಯ ರಾಷ್ಟ್ರೀಯನಾಟಕ ಶಾಲೆಯ ಮಾದರಿಯಲ್ಲಿ ರೂಪಿತವಾಗಿರುವ ನೀನಾಸಮ ರಂಗಶಿಕ್ಷಣ ನಾಟಕ ಕೇಂದ್ರಗಳ ಮೂಲಕ ಇಂದಿಗೂ ಕೂಡ ಕಾರ್ಯನಿರ್ವಹಿಸುತ್ತಿರುವುದು ಒಂದು ಖುಷಿಯ ವಿಚಾರವಾಗಿದೆ.

**ಉಪಸಂಹಾರ**

ಹೀಗೆ ಮೇಲೆ ಹೇಳಿದ ಚಟುವಟಿಕೆಗಳ ಮೂಲಕ ಸುಧೀರ್ಘ ಅರವತ್ತೇಳು ವರ್ಷಗಳ ಸ್ಥಳೀಯ ಆಸಕ್ತರ ಸಂಘಟನೆಯೊಂದಿಗೆ ನೀನಾಸಂ ರಂಗಭೂಮಿಯು ವಿವಿಧ ಚಟುವಟಿಕೆಗಳಾಗಿ ಹರಳುಗಟ್ಟಿ ಕಾರ್ಯನಿರ್ವಹಿಸುತ್ತಿದೆ. ಹೊಸ ಪ್ರಜಾಪ್ರಭುತ್ವದ ಕನಸನ್ನು ವೈಯಕ್ತಿಕ ಮತ್ತು ಸಾಮೂಹಿಕ ಬೆಳವಣಿಗೆಯಲ್ಲಿ ಸಾಧಿಸಿಕೊಳ್ಳಲು ಹವಣಿಸುತ್ತಿರುವ ಹಳ್ಳಿಯ ಕಲಾ ಆಸಕ್ತರಿಂದ ನಡೆದ ಸಾಧನೆ ಇದಾಗಿದ್ದು, ಹೊಸ ಗ್ರಾಮೀಣ ಭಾರತ ಸಮಷ್ಠಿಯೊಂದಿಗೆ ಬೆಳಗಲು ಪ್ರಯತ್ನ ನಡೆಯುತ್ತಿದೆ.

ಈಡೀ ದೇಶದ, ರಾಜ್ಯದ ಹೆಸರಾಂತ ಸಾಹಿತಿಗಳು ಅಷ್ಟೇ ಅಲ್ಲದೇ ವಿಮರ್ಶಕರು, ಕೇಳುಗರು, ವಿದ್ಯಾರ್ಥಿಗಳು, ಶಿಕ್ಷಕರು, ನಾಟಕಕಾರರು, ಕಲಾವಿಧರು ಎಲ್ಲಾ ವರ್ಗದವರು ಆಸಕ್ತಿಯಿರುವ ಎಲ್ಲಾ ಜನರು ಹೆಗ್ಗೋಡಿನತ್ತ ಮುಖ ಮಾಡಿದ್ದು ಮಾತ್ರ ನೀನಾಸಂನ ನಿಜವಾದ ಸಾಧನೆಯಾಗಿದೆ. ನಗರಗಳಲ್ಲೇ ಎಲ್ಲಾ ನಡೆಯುವುದು ಹಳ್ಳಿಗಳಲ್ಲೇ ಏನೂ ಇಲ್ಲ ಎನ್ನುವ ಭ್ರಮೆಯ ಪರದೆಯನ್ನು ಸರಿಸಿದ ಕೀರ್ತಿ ಈ ನೀನಾಸಂ ರಂಗಭೂಮಿಗೆ ಸಲ್ಲುತ್ತದೆ. ಕೆ.ವಿ.ಸುಬ್ಬಣ್ಣನವರಿಂದ ಹೊರಹೊಮ್ಮಿದ ನೀನಾಸಂ ರಾಗ ಹೀಗೆಯೇ ಎಂದೆಂದಿಗೂ ಹರಿಯುತ್ತಲೇ ಇರಲಿ ಎಂಬುದು ನನ್ನ ಹಾಗು ಕನ್ನಡ ನಾಡಿನ ಜನರೆಲ್ಲರ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಾವನ್ ಅಹುಜಾ. (1999). ನೀನಾಸಂ ಇತಿಹಾಸ. ಅಹುಜಾಸ್ ಪಬ್ಲಿಕೇಶನ್ಸ್, ಬೆಂಗಳೂರು.
- ಸುಬ್ಬಣ್ಣ. ಕೆ. ವಿ. (2007). ನೀನಾಸಂ ಬೆಳವಣಿಗೆ. ಅಕ್ಷರ ಪ್ರಕಾಶನ, ಹೆಗ್ಗೋಡು.
- ಸುಧಾನ್ವ ದೇಶಪಾಂಡೆ. (2005). ಎ ಡಿಸ್ಕ್ರಿಪ್ಸನ್ ಆಫ್ ನೀನಾಸಂ ಫಿಲಂ ಸೊಸೈಟಿ, ಆಚಾರ್ಯ ಪಬ್ಲಿಕೇಶನ್ಸ, ದೆಹಲಿ.